ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1577 |
| ಮಾನ್ಯ ಸದಸ್ಯರ ಹೆಸರು | : | ಡಾ: ಯತೀಂದ್ರ ಎಸ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆದಾಯ ಪ್ರಮಾಣ ಪತ್ರಗಳಲ್ಲಿ "ಪೋಷಕರ ಆದಾಯ" ಪರಿಗಣಿಸುವ ಬದಲು "ಕುಟುಂಬ ಆದಾಯ" ಪರಿಗಣಿಸುತ್ತಿರುವುದರಿಂದ ಹಿಂದುಳಿದ ವರ್ಗಗಳ ಉದ್ಯೋಗಾಕಾಂಕ್ಷಿಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002ರ ಆದೇಶದಲ್ಲಿನ ಅನುಬಂಧ-2ರಲ್ಲಿ ಹೊಸ ಸಮಗ್ರ ಕೆನೆಪದರ ನೀತಿಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.<br>• ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರು, ಸರ್ಕಾರದ 1ನೇ ಅಥವಾ 2ನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ ಅಥವಾ ಖಾಸಗಿ ಕೈಗಾರಿಕೆ-ಸಂಸ್ಥೆಗಳ ಉದ್ಯೋಗಿಯಾಗಿದ್ದು, 2ನೇ ದರ್ಜೆಯ ಅಧಿಕಾರಿಯು ಪಡೆಯುತ್ತಿರುವ ಶ್ರೇಣಿಗಿಂತ ಕಡಿಮೆ ಇಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ (ವೇತನ ಶ್ರೇಣಿ ರೂ.6000-11200) (ಪರಿಷ್ಕರಿಸಲಾಗಿರುತ್ತದೆ)<br>• ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ ಪೋಷಕರು ವಾರ್ಷಿಕ ಒಟ್ಟು ಆದಾಯ (gross annual) ರೂ.2.00 ಲಕ್ಷ ಮೀರಿದ್ದರೆ. (ಹಾಲಿ ರೂ.8.00 ಲಕ್ಷಕ್ಕೆ ಹೆಚ್ಚಿಸಲಾಗಿದೆ)<br>ಮೇಲಿನ ಕೆನೆಪದರ ನೀತಿಯನ್ವಯ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಆದಾಯವನ್ನು ಲೆಕ್ಕ ಹಾಕುವಾಗ ಅಭ್ಯರ್ಥಿಯ ಮತ್ತು ಪೋಷಕರ ಒಟ್ಟು ಆದಾಯವನ್ನು ಪರಿಗಣಿಸಲಾಗುತ್ತಿರುತ್ತದೆ. |
| ಆ) | ಕೇಂದ್ರ ಸರ್ಕಾರವು ಒಬಿಸಿ ಪ್ರಮಾಣ ಪತ್ರಗಳಲ್ಲಿ "ಪೋಷಕರ ಆದಾಯ" ಪರಿಗಣಿಸುತ್ತಿದ್ದು, ಆದರೆ ರಾಜ್ಯ ಸರ್ಕಾರವು ಆದಾಯ ಪ್ರಮಾಣ ಪತ್ರಗಳಿಗೆ "ಕುಟುಂಬ ಆದಾಯ"ವನ್ನು ಪರಿಗಣಿಸುತ್ತಿರುವುದು ಸರಿಯೇ? (ವಿವರ ಒದಗಿಸುವುದು) | ಕೇಂದ್ರ ಸರ್ಕಾರದ ಒಬಿಸಿ ಪ್ರಮಾಣ ಪತ್ರಗಳನ್ನು ವಿತರಿಸುವ ಸಂಬಂಧ ಭಾರತ ಸರ್ಕಾರದ ಸಿಬ್ಬಂದಿ ಸಾರ್ವಜನಿಕರ ಕುಂದು ಕೊರತೆ ಮತ್ತು ಪಿಂಚಣಿ ಮಂತ್ರಾಲಯ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಕಚೇರಿ ಪತ್ರ ಸಂಖ್ಯೆ:36033/5/2004 Estt (Res), ದಿನಾಂಕ: 14.10.2004ರ ಕಂಡಿಕೆ 8 ರಲ್ಲಿ "it is clarified that the creamy layer status of a candidate is determined on the basis of the status of his parents and not on the basis of his own status or income or on the basis of status or income of his/her spouse. Therefore, while determining the creamy layer status of a person the status or income of the e candidate himself or of his/her spouse shall not be taken into account" ಎಂಬುದಾಗಿರುತ್ತದೆ.<br>ಪ್ರಯುಕ್ತ, ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರದ ಕೆನೆಪದರ ನೀತಿಯನ್ನು ಪರಿಷ್ಕರಣೆ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ:ಹಿಂವಕ 109 ಬಿಸಿಎ 2025

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು